# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 29 (324) |
| ಸದಸ್ಯರ ಹೆಸರು | : | ಶ್ರೀ ಕೆ.ಹರೀಶ್ ಕುಮಾರ್ |
| ಉತ್ತರಿಸುವ ದಿನಾಂಕ | : | 14-09-2021 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪಟ್ಟಣ ಪಂಚಾಯತ್/ನಗರ ಪಂಚಾಯತ್ ವ್ಯಾಪ್ತಿಯಲ್ಲಿ ಜಮೀನಿನ ವಿಸ್ತೀರ್ಣವು 0.25 ಎಕರೆ (1000 ಚ.ಮೀ) ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣದ ಜಮೀನುಗಳಿಗೆ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಂದ ಬಹು ನಿವೇಶನ ಬಡಾವಣೆ ನಕ್ಷೆ ಅನುಮೋದನೆ ಸಂದರ್ಭದಲ್ಲಿ 5% ವಿಸ್ತೀರ್ಣದ ಜಮೀನನ್ನು ಆಟದ ಮೈದಾನಕ್ಕಾಗಿ ಹಾಗೂ 5% ಜಾಗವನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಕಾಯ್ದಿರಿಸುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಕಾಯ್ದಿರಿಸಿದ ಜಾಗದ ಉದ್ದೇಶವು ಈಡೇರಿಸಲು ಸಾಧ್ಯವೇ; | 1.ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸಿರುವ ಪ್ರದೇಶಗಳಲ್ಲಿ ಬರುವ ಪಟ್ಟಣ ಪಂಚಾಯಿತಿ/ನಗರ ಪಂಚಾಯಿತಿ ವ್ಯಾಪ್ತಿಯಲ್ಲಿ 4000.00 ಚ.ಮೀ ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣ ಇರುವಂತಹ ಜಮೀನುಗಳಿಗೆ ಬಹುನಿವೇಶನ ವಸತಿ ವಿನ್ಯಾಸ ಅನುಮೋದಿಸುವಾಗ ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ 162 ಬೆಂರೂಪ್ರಾ 2011, ದಿನಾಂಕ:14.09.2012 ರನ್ವಯ ಶೇ.15ರಷ್ಟು ಜಾಗೆಯನ್ನು ಉದ್ಯಾವನದ ಉಪಯೋಗಕ್ಕಾಗಿ ಕಾಯ್ದಿರಿಸಬೇಕಾಗಿರುತ್ತದೆ. (ಅನುಬಂಧ-1 ರಲ್ಲಿ ಒದಗಿಸಿದೆ.)<br><br>2)ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸದೇ ಇರುವ ಪ್ರದೇಶಗಳಲ್ಲಿ ಬರುವ ಪಟ್ಟಣ ಪಂಚಾಯಿತಿ / ನಗರ ಪಂಚಾಯಿತಿ ವ್ಯಾಪ್ತಿಯಲ್ಲಿ 4000.00 ಚ.ಮೀ ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣ ಇರುವಂತಹ ಜಮೀನುಗಳಿಗೆ ಬಹುನಿವೇಶನ ವಸತಿ ವಿನ್ಯಾಸ ಅನುಮೋದಿಸುವಾಗ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಸುತ್ತೋಲೆ ಸಂಖ್ಯೆ:ನಗ್ರಾಯೋನಿ/ಉ.ನಿ(ಯೋ.ವಿ)/ವಿನ್ಯಾಸ ನಕ್ಷೆ ಸುತ್ತೋಲೆ/01/2012-13, ದಿನಾಂಕ:07.08.2013 ರನ್ವಯ ಶೇ.15ರಷ್ಟು ಜಾಗೆಯನ್ನು ಉದ್ಯಾನವನದ ಉಪಯೋಗಕ್ಕಾಗಿ ಕಾಯ್ದಿರಿಸಬೇಕಾಗಿರುತ್ತದೆ. ಅನುಬಂಧ-2 ರಲ್ಲಿ ಒದಗಿಸಿದೆ.) |

<table>
<tr><td>ಆ)</td><td>ಭೂ ನಿವೇಶನ ವಿನ್ಯಾಸ ನಕ್ಷೆ ಮಂಜೂರಾತಿಯಲ್ಲಿ 0.01 ಎಕರೆ / 0.02 ಎಕರೆ ಜಾಗವನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸಣ್ಣ ಪ್ರಮಾಣದ ಜಾಗವನ್ನು ಕಾಯ್ದಿರಿಸಿರುವುದರಿಂದ ಪ್ರಯೋಜನವಾಗುವುದೇ;</td><td rowspan="2">ಶೇ.15 ರಷ್ಟು ಉದ್ಯಾನವನ ಕಾಯ್ದಿರಿಸಿರುವುದರಿಂದ ಲಭ್ಯವಾಗುವ ಜಾಗವು ಉಪಯೋಗಕ್ಕೆ ಬರುತ್ತದೆ.</td></tr>
<tr><td>ಇ)</td><td>ಸಾರ್ವಜನಿಕ ಉಪಯೋಗಕ್ಕಾಗಿ ಇಷ್ಟು ಸಣ್ಣ ಪ್ರಮಾಣದ ಜಾಗವನ್ನು ಯಾವ ರೀತಿ ಸದುಪಯೋಗ ಪಡಿಸಿಕೊಳ್ಳಲು ಉದ್ದೇಶಿಸಲಾಗಿರುತ್ತದೆ? (ಸಂಪೂರ್ಣ ಮಾಹಿತಿ ಒದಗಿಸುವುದು)</td></tr>
</table>

**ಸಂಖ್ಯೆ: ನಅಇ 25 ಎಲ್‌ಎಕ್ಯೂ 2021(ಇ-ಕಡತ)**

(ಬಿ.ಎ. ಬಸವರಾಜು)
ನಗರಾಭಿವೃದ್ಧಿ ಸಚಿವರು

ಅನುಬಂಧ-1 (45)

KA / BG - GPO/ 2515 /WPP-47/ 2009 - 2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

| ಭಾಗ – IV-A | ಬೆಂಗಳೂರು, ಶನಿವಾರ, ಸೆಪ್ಟೆಂಬರ್ ೧೫, ೨೦೧೨ (ಭಾದ್ರಪದ ೨೪, ಶಕ ವರ್ಷ ೧೯೩೪) | ಸಂ. ೬೪೮ |
|---|---|---|

## URBAN DEVELOPMENT SECRETARIAT

## NOTIFICATION

**No. Udd 162 Bemrupra 2011, Bangalore, Dated: 14.09.2012**

**In exercise of the powers conferred under Section 13 E of Karnataka Town and Country Planning Act, 1961, the Government of Karnataka, notified certain regulations** regarding exemption of open space and civic amenities in sub-division of land in less than 4000 sqm (0.40 ha) of land to be incorporated under sub heading **"Open Spaces and Civic Amenities"** in the zonal regulations of the master plans of all local planning areas approved by the Government **vide Notification No UDD 522 My Aa pra 2005 Dated 10.03.2006.**

Whereas, the provision to provide Exemption for open spaces and Civic Amenities in certain residential developments in lieu of payment of market value of land is comprehensively re-examined by the Government and in view of the implications involved in implementing this provision it has been decided to revise the provision.

After careful consideration and in exercise of the powers vested under section 76-K of the K.T.C.P. Act, 1961, the Government withdraws the following provision No. I(I to v), notified in the final notification no UDD 522 My Aa Pra 2005, Dated 10.03.2006

"1. Exemption for open spaces and civic amenities in sub-division of land

i) Subject to the provisions of Master plan (ODP/CDP/CDR(R)) in respect of land use, proposed roads and minimum road width, wherever the total extent of land of the private residential layout for

ii) approval by the planning Authority is 4000 sq m (0.40 hectares) and below, reservation of open space and civic amenities areas as per the zonal Regulations/Sub-division Rules may be dispensed with.

iii) In lieu of this the Planning Authority may collect the market value of converted equivalent land as fixed by the Sub-Registrar.

iv) The value to be recovered from the land owner in lieu of open space and civic amenities shall be in addition to the fee to be collected under Section 18 of the K.T.C.P. Act, development charges and any other fees /charges prescribed by the Government from time to time.

v) The Planning Authority shall deposit the amount so collected under a separate head of Account and the amount shall be utilized only for acquisition of areas reserved for parks and open spaces in the approved Master Plan (ODP/CDP/CDP(R)). The Planning Authority shall under no circumstances divert this amount for any other purposes.

In case the land owner refuses to pay the market value of the equivalent land in lieu of open space and civic amenity to be reserved, the planning Authority shall approve the sub-division providing land separately to an extent which otherwise would have been reserved for parks, open spaces and civic amenities as per Zonal Regulations and shall take possession of such land fee of cost from the land owner, and the Authority may dispose the same through auction for the purpose decided by the Authority.

And in exercise of the powers vested u/s 76-k of KTCP Act 1961, the following provision is substituted with immediate effect.

"Subject to the provisions of Master Plan in respect of land use, proposed roads and minimum road width, wherever the total extent of land of the private residential layout of approval by the Planning Authority is 4000 sq.m (0.40 hectares) and below, 15% of the total area shall be reserved for parks and open spaces".

By order and in the name of Governor of Karnataka.

**T.M. Vasudeva Rao**
Under secretary to Government
Urban Development Department

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಟಿ3) (೧೦೦ ಪ್ರತಿಗಳು)

ಅನುಬಂಧ -2

(48)

ಕರ್ನಾಟಕ ಸರ್ಕಾರ
ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

**"ಸುತ್ತೋಲೆ"**

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸದೇ ಇರುವ ಪ್ರದೇಶಗಳಲ್ಲಿ, ಯಾವುದೇ ಜಮೀನಿನ ವಿಸ್ತೀರ್ಣ 4000.0 ಚ.ಮೀ ಅಥವಾ ಅದಕ್ಕಿಂತ ಕಡಿಮೆ ಇದ್ದಲ್ಲಿ ಅಂತಹ ಜಮೀನುಗಳಿಗೆ ಬಹು ನಿವೇಶನಗಳ ವಸತಿ ವಿನ್ಯಾಸ ಅನುಮೋದಿಸುವ ಸಂಬಂಧ ಅನುಸರಿಸಬೇಕಾದ ಮಾರ್ಗಸೂಚಿಗಳು.

ಉಲ್ಲೇಖ:1.ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ನಯೋ/ ಉನಿ(ವಿವಿ)/ ಸುತ್ತೋಲೆ/ವಿನ್ಯಾಸ:05:06, ದಿ:02.09.2005

2. ಸರ್ಕಾರದ ಅಧಿಸೂಚನೆ ಸಂಖ್ಯೆ ಯುಡಿಡಿ ಮೈಅಪ್ರಾ2005, ದಿ:10.03.2006
3. ಸರ್ಕಾರದ ಅಧಿಸೂಚನೆ ಸಂಖ್ಯೆ ನಅಇ:162:ಬೆಂರೂಪ್ರಾ:2011 ದಿ:14.09.2012
4. ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ನಗ್ರಾಯೋನಿ/ ಉನಿ(ಯೋವಿ)/ವಿನ್ಯಾಸ ನಕ್ಷೆ/ಸುತ್ತೋಲೆ/01/2012-13, ದಿ:02.04.2013.

*******

**ಪ್ರಸ್ತಾವನೆ:**

ರಾಜ್ಯದಲ್ಲಿನ ಯಾವುದೇ ಜಮೀನಿನ ಒಟ್ಟು ವಿಸ್ತೀರ್ಣ 4000.0 ಚ.ಮೀ ಅಥವಾ ಅದಕ್ಕಿಂತ ಕಡಿಮೆ ಇರುವಂತಹ ಜಮೀನುಗಳಿಗೆ ಬಹು ನಿವೇಶನಗಳ ವಸತಿ ವಿನ್ಯಾಸ ಅನುಮೋದಿಸುವಾಗ ಉದ್ಯಾನವನ ಮತ್ತು ಸಾರ್ವಜನಿಕ ಸೌಲಭ್ಯಕ್ಕಾಗಿ ವಿನಾಯಿತಿ ನೀಡಿ ಮಾರುಕಟ್ಟೆ ಬೆಲೆಯ ಕನಿಷ್ಠ ಶೇ.10 ರಷ್ಟು ಶುಲ್ಕ ಪಡೆಯಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸಿದ ಪ್ರದೇಶಗಳಿಗೆ ಸಂಬಂಧಿಸಿದಂತೆ ಉಲ್ಲೇಖ (2) ರ ಸರ್ಕಾರದ ಅಧಿಸೂಚನೆಯಲ್ಲಿ ಮತ್ತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸದೇ ಇರುವ ಪ್ರದೇಶಗಳಿಗೆ ಸಂಬಂಧಿಸಿದಂತೆ, ಉಲ್ಲೇಖ (1) ರ ಇಲಾಖೆಯ ಸುತ್ತೋಲೆಯಲ್ಲಿ ಅವಕಾಶ ಕಲ್ಪಿಸಿ ಆದೇಶಿಸಲಾಗಿರುತ್ತದೆ.

ಉಲ್ಲೇಖ (3) ರ ದಿ:14-09-2012ರ **ಸರ್ಕಾರದ ಅಧಿಸೂಚನೆಯಲ್ಲಿ**, ಸರ್ಕಾರವು ಉಲ್ಲೇಖ (2) ರ ಅಧಿಸೂಚನೆಯಲ್ಲಿ ಕಲ್ಪಿಸಿದ ಉದ್ಯಾನವನ ಮತ್ತು ಸಾರ್ವಜನಿಕ ಸೌಲಭ್ಯಕ್ಕಾಗಿ ವಿನಾಯಿತಿ ನೀಡಿ ಮಾರುಕಟ್ಟೆ ಬೆಲೆಯ **ಶೇ.10 ರಷ್ಟು ಶುಲ್ಕ ಪಡೆಯುವ ಅವಕಾಶವನ್ನು ಹಿಂಪಡೆದುಕೊಂಡು** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸಿರುವ ಪ್ರದೇಶಗಳಿಗೆ 4000.00 ಚ.ಮೀ ಅಥವಾ ಅದಕ್ಕಿಂತ ಕಡಿಮೆ ವಿಸ್ತೀರ್ಣ ಇರುವಂತಹ ಜಮೀನುಗಳಿಗೆ ಬಹು ನಿವೇಶನಗಳ ವಸತಿ ವಿನ್ಯಾಸ ಅನುಮೋದಿಸುವಾಗ ಶೇ.15 ರಷ್ಟು **ಜಾಗವನ್ನು ಉದ್ಯಾನದ ಉಪಯೋಗಕ್ಕಾಗಿ ಕಾಯ್ದಿರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.**

v:va:ltr:1017

Scanned with CamScanner

ಉಲ್ಲೇಖ (3) ರ ಸರ್ಕಾರದ ಅಧಿಸೂಚನೆಯಲ್ಲಿ ಕಲ್ಪಿಸಿದ ಅವಕಾಶಗಳಿಗೆ ಅನುಗುಣವಾಗಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ವಿಸ್ತರಿಸದೇ ಇರುವ ಪ್ರದೇಶಗಳಲ್ಲಿ ಇಲಾಖಾ ವತಿಯಿಂದ ಅನುಮೋದಿಸುವ ಸದರಿ 4000.00 ಚ.ಮೀ ಅಥವಾ ಅದಕ್ಕಿಂತ ಕಡಿಮೆ ಇರುವಂತಹ ಜಮೀನುಗಳಿಗೆ ಬಹು ನಿವೇಶನಗಳ ವಸತಿ ವಿನ್ಯಾಸ ಅನುಮೋದಿಸುವಾಗ ಶೇ.15 ರಷ್ಟು ಉದ್ಯಾನವನ ಕಾಯ್ದಿರಿಸುವ ಸಂಬಂಧ ಉಲ್ಲೇಖ (4) ರಲ್ಲಿ ಇಲಾಖಾ ವತಿಯಿಂದ ಸುತ್ತೋಲೆಯನ್ನು ಹೊರಡಿಸಲಾಗಿದ್ದು, ಸದರಿ ಸುತ್ತೋಲೆಯಲ್ಲಿ ಕೆಲವು ತಾಂತ್ರಿಕ ಲೋಪದೋಷಗಳಿದ್ದ ಹಿನ್ನಲೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದು (ಉಲ್ಲೇಖ (3) ರ ಸರ್ಕಾರದ ಅಧಿಸೂಚನೆಯಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ) ಈ ಕೆಳಕಂಡಂತೆ ಮಾರ್ಪಾಡಿತ **ಸುತ್ತೋಲೆ ಹೊರಡಿಸಲಾಗಿದೆ.**

7 AUG 2013

**ಆದೇಶ ಸಂಖ್ಯೆ: ನಗ್ರಾಯೋನಿ/ ಉನಿ(ಯೋವಿ)/ವಿನ್ಯಾಸ ನಕ್ಷೆ/ಸುತ್ತೋಲೆ/01/2012-13, ದಿ: - -2013.**

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು **ವಿಸ್ತರಿಸದೇ ಇರುವ ಪ್ರದೇಶಗಳಿಗೆ ಯಾವುದೇ ಜಮೀನಿನ ಒಟ್ಟು ವಿಸ್ತೀರ್ಣ** 4000.00 ಚ.ಮೀ ಅಥವಾ ಅದಕ್ಕಿಂತ ಕಡಿಮೆ ಇರುವಂತಹ **ಜಮೀನುಗಳಿಗೆ ಬಹು ನಿವೇಶನಗಳ ವಸತಿ** ವಿನ್ಯಾಸ ಅನುಮೋದಿಸುವಾಗ **ಶೇ.15 ರಷ್ಟು ಜಾಗವನ್ನು ಉದ್ಯಾನವನ ಉಪಯೋಗಕ್ಕಾಗಿ ಕಾಯ್ದಿರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.**

ಸಹಿ:
ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು (ಪ್ರ)

**ಪ್ರತಿಯನ್ನು,**

1. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ವಲಯ ಕಛೇರಿ, ಧಾರವಾಡ, ವಿಭಾಗೀಯ ಕಛೇರಿ ಬೆಂಗಳೂರು/ ಮೈಸೂರು/ಗುಲ್ಬರ್ಗಾ ಮತ್ತು ಎಲ್ಲಾ ಶಾಖಾ ಕಛೇರಿಯ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಕೇಂದ್ರ ಕಛೇರಿಯ ಎಲ್ಲಾ ಪತ್ರಾಂಕಿತ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ನೀಡಲಾಗಿದೆ.
4. ಕೇಂದ್ರ ಕಛೇರಿಯ ಎಲ್ಲಾ ತಾಂತ್ರಿಕ ಸಿಬ್ಬಂದಿ ವರ್ಗಕ್ಕೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ನೀಡಲಾಗಿದೆ.
5. ಕಛೇರಿ ಪ್ರತಿ.

ನಗರ ಮತ್ತು ಗ್ರಾಮಾಂತರ ಯೋಜನಾ
ನಿರ್ದೇಶಕರು (ಪ್ರ)

v:va:ltr:1018

Scanned with CamScanner